ಸಾಕ್ಷಿಯನ್ನು ದಿಃ**11.03.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಬಿ ಎಂ ವಕೀಲರಿಂದಃ-**

ನಾನು ಬಿ ಎ ಪದವಿ ಓದಿದ್ದೇನೆ. ನಿಪಿ 1 ರ ಅಧಿಕಾರ ಪತ್ರವನ್ನು ಚಿಕ್ಕಪ್ಪನಾದ 3 ನೇ ವಾದಿ ಬರೆದುಕೊಟ್ಟಿದ್ದಾರೆ. ಅವರ ಹೆಸರು ಶಿವಣ್ಣನಾಯಕ. ಸಾಕ್ಷಿಗೆ ವಾದಿ ಪತ್ರವನ್ನು ತೋರಿಸಿ ಅದರಲ್ಲಿ ಶಿವಣ್ಣನಾಯಕ ಎಂಬ ಹೆಸರು ಇದೆಯೇ ಎಂದರೆ ತಪ್ಪಾಗಿ ಶಿವಣ್ಣ ಎಂದು ನಮೂದಾಗಿರುವುದಾಗಿ ನುಡಿಯುತ್ತಾರೆ. 3 ನೇ ವಾದಿಯ ಸಹಿಯನ್ನು ವಾದ ಪತ್ರದಲ್ಲಿ ತೋರಿಸಲಾಗುತ್ತದೆಯೇ ಎಂದರೆ ಸಾಕ್ಷಿಯು ಅವರು ಶಿವಣ್ಣ ಎಂದು ಸಹಿ ಮಾಡಿದ್ದಾರೆಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಮೂರನೇ ವಾದಿಯ ಹೆಸರು ಶಿವಣ್ಣ ಎಂದು ಹಾಗೂ ಅವರ ಸಹಿ ಕೂಡ ಶಿವಣ್ಣ ಎಂದು ನಮೂದಾಗಿದೆ. ಮೂರನೇ ವಾದಿಗೆ ಈಗ 45 ವರ್ಷ ವಯಸ್ಸಾಗಿದೆ. ನಿಪಿ 1 ರಲ್ಲಿ ಮೂರನೇ ವಾದಿಯ ಹೆಸರು 55 ವರ್ಷ ವಯಸ್ಸು ಎಂದು ಬರೆಯಲಾಗಿದೆ. ನಿಪಿ 1 ರಲ್ಲಿ ಮೂರನೇ ವಾದಿ ಶಿವಣ್ಣನಾಯಕ ಎಂದು ಸಹಿ ಹಾಕಿದ್ದಾರೆ. ವಾದ ಪತ್ರದಲ್ಲಿ ಕಾಣಿಸಿದ ಮೂರನೇ ವಾದಿ ಮತ್ತು ನನಗೆ ಅಧಿಕಾರ ಪತ್ರ ಬರೆದುಕೊಟ್ಟ ಶಿವಣ್ಣನಾಯಕ ಬೇರೆ ಬೇರೆ ವ್ಯಕ್ತಿಗಳು ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಶಿವಣ್ಣನಾಯಕ ಎಂದು ಬರೆದಿರುವ ಕಾರಣ ನನಗೆ ಸಾಕ್ಷಿ ಹೇಳಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

1975-76 ರಲ್ಲಿ ನರಸಿಂಹಶೆಟ್ಟರವರಿಗೆ ಭೋಗ್ಯ ಮಾಡಲಾಗಿದೆ. ಭೋಗ್ಯವನ್ನು ನನ್ನ ತಾತನಾಗಲೀ ತಂದೆಯಾಗಲೀ ವಾಪಸ್ಸು ಬರೆಸಿಕೊಂಡಿಲ್ಲ. ಭೋಗ್ಯ ಪತ್ರದ ಹಣ ವಾಪಸ್ಸು ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇವೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಹಣ ಕೊಟ್ಟ ಬಗ್ಗೆ ಮತ್ತು ಹಣ ಸ್ವೀಕರಿಸಿದ ಬಗ್ಗೆ ಯಾರಾದರೂ ಸಾಕ್ಷಿ ಇದ್ದಾರೆಯೇ ಎಂದರೆ ಇಲ್ಲ. ನನ್ನ ತಾತ ಭೋಗ್ಯ ಮಾಡಿಕೊಟ್ಟಾಗಿನಿಂದ ಇಲ್ಲಿಯವರೆಗೆ ಪಹಣಿ ಅವರ ಹೆಸರಿನಲ್ಲಿಯೇ ಇದೆ. ಪಹಣಿಯನ್ನು ರದ್ದು ಪಡಿಸುವಂತೆ 2012-13 ರಲ್ಲಿ ಕುನಿಯಾನ್ ಜವರನಾಯ್ಕ ರವರು ಎಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ಏನಾಯಿತು ಎಂದರೆ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸುವಂತೆ ಎಸಿ ಆದೇಶ ಮಾಡಿದರು. ಆ ರೀತಿ ಆದೇಶ

ಮಾಡಿದರು ಎಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ. ಹೆಸರು ತಪ್ಪಾಗಿದ್ದರಿಂದ ಎಸಿ ನ್ಯಾಯಾಲಯದಲ್ಲಿ ಪ್ರಕರಣ ವಜಾಗೊಂಡಿತು ಎಂದು ವಾದ ಪತ್ರದಲ್ಲಿ ಬರೆಸಿದ್ದೇನೆಂದರೆ ಸರಿ. 25 ವರ್ಷ ಆಗಿರುವ ಕಾರಣ ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಎಸಿ ಆದೇಶ ಮಾಡಿದರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.